**ದಿನಾಂಕಃ 08.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀಸವಾಲು : ಪ್ರತಿವಾದಿಗಳ ಪರ ವಕೀಲರಿಂದಃ**

1. ನಾನು ಕಾಂಟ್ರಾಕ್ಟರ್ ಕೆಲಸ ಮಾಡುತ್ತೇನೆ. ನಾನು ದಿನಾಂಕ 12.01.2018 ರಂದು ಚೆಕ್ ನಂ. 899020 ಮೂಲಕ ರೂ. 9 ಲಕ್ಷ ಕೊಟ್ಟಿದ್ದೆ ಎಂದು ದಾವೆಯಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ನಾನು ಕೊಟ್ಟಿದ್ದ ಇನ್ನೊಂದು ಚೆಕ್ ಸಂಖ್ಯೆ ಏನು? ಎಂದರೆ 817135 ಆಗಿದ್ದು ಅದು ಸಿಂಡಿಕೇಟ್ ಬ್ಯಾಂಕ್ ನ ಚೆಕ್ ಆಗಿತ್ತು. ನನ್ನ ಬ್ಯಾಂಕ್ ಖಾತೆಯ ಮೂಲಕ ಆ ಚೆಕ್ ನಲ್ಲಿ ನಮೂದಿಸಿರುವ ಮೊತ್ತವು ಡೆಬಿಟ್ ಆಗಿರುವ ಬಗ್ಗೆ ದಾಖಲೆ ಹಾಜರು ಮಾಡಿಲ್ಲ ಎಂದರೆ ಅವನ್ನು ನನ್ನ ವಕೀಲರಿಗೆ ಕೊಟ್ಟಿದ್ದೇನೆ. ಆ ಚೆಕ್ ನಂ. 817135 ನಲ್ಲಿ ನಮೂದಿಸಿದ ಮೊತ್ತವು ಯಾರ ಬ್ಯಾಂಕ್ ಖಾತೆಗೆ ಜಮಾ ಆಗಿದೆ? ಎಂದರೆ 5 ನೇ ಪ್ರತಿವಾದಿ ರಾಮಾಂಜನೇಯನ ಬ್ಯಾಂಕ್ ಖಾತೆಗೆ ಜಮಾ ಆಗಿರುತ್ತದೆ. ಈ ಎರಡು ಚೆಕ್ ಗಳ ವ್ಯವಹಾರ ಬಿಟ್ಟರೆ ಬೇರೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿರಲಿಲ್ಲ ಎಂದರೆ ಸರಿ. 5 ನೇ ಪ್ರತಿವಾದಿಯ ಖಾತೆಗೆ ಚೆಕ್ ಮೊತ್ತ ಜಮಾ ಆಗಿರುವ ಬಗ್ಗೆ ನಾನು ಯಾವುದೇ ದಾಖಲೆ ಹಾಜರು ಮಾಡಿಲ್ಲ ಎಂದರೆ ಅದನ್ನು ನನ್ನ ವಕೀಲರಿಗೆ ಕೊಟ್ಟಿದ್ದೇನೆ. ನಾನು ಚೆಕ್ ನಂ. 817135 ನ್ನು 5 ನೇ ಪ್ರತಿವಾದಿಗೆ ಕೊಟ್ಟಿಲ್ಲ ಮತ್ತು ಆತನ ಬ್ಯಾಂಕ್ ಖಾತೆಗೆ ಯಾವುದೇ ಹಣ ಸಂದಾಯವಾಗಿಲ್ಲ ಎಂದರೆ ಸಾಕ್ಷಿಯು ಮತ್ತೆ ಬ್ಯಾಂಕ್ ಸ್ಟೇಟ್‌ಮೆಂಟನ್ನು ನನ್ನ ವಕೀಲರ ಕೈಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ಲಕ್ಷಗಟ್ಟಲೆ ಹಣದ ಮೊತ್ತದ ವ್ಯವಹಾರವಾಗಿರುವ ಕಾರಣ ಸಾಕ್ಷಿಗಳನ್ನು ಮುಂದಿಟ್ಟುಕೊಂಡು ವ್ಯವಹಾರ ಮಾಡುತ್ತಾರೆ ಎಂದರೆ ನನಗೆ ಪ್ರತಿವಾದಿಗಳು ಪರಿಚಯವಿದ್ದಿದ್ದರಿಂದ ನಾನು ಸಾಕ್ಷಿಗಳ ಸಮಕ್ಷಮದಲ್ಲಿ ವ್ಯವಹಾರ ಮಾಡಲಿಲ್ಲ. ಎಲ್ಲಾ ಪ್ರತಿವಾದಿಗಳು ನನ್ನಿಂದ ಕೇವಲ ರೂ. 9 ಲಕ್ಷ ಮಾತ್ರ ಪಡೆದಿದ್ದಾರೆ ಎಂದರೆ ರೂ 15 ಲಕ್ಷ ಪಡೆದುಕೊಂಡು ಅಗ್ರೀಮೆಂಟನಲ್ಲಿ ಸಹಿ ಕೂಡಾ ಮಾಡಿದ್ದಾರೆ.

2. ಅಗ್ರೀಮೆಂಟ್ ಮಾಡುವಾಗ ಎಷ್ಟು ಜನ ಇದ್ದರು? ಎಂದರೆ 12 ಜನ ಪ್ರತಿವಾದಿಗಳು ಕೂಡಾ ಇದ್ದರು. ಪ್ರತಿವಾದಿಗಳಿಗೆ ಹೊಲ ಡೆವಲಪ್ ಮಾಡುವ ಬಗ್ಗೆ ಹಣದ ಅವಶ್ಯಕತೆ ಇತ್ತು. ಆ ಕಾರಣದಿಂದ ಅವರು ನನ್ನ ಬಳಿ ರೂ. 15 ಲಕ್ಷ ಸಾಲ ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಸಂಬಂಧವಾಗಿ ಪ್ರತಿವಾದಿಗಳು ನನಗೆ ಇನ್ನೊಂದು ದಾಖಲೆ ಕೂಡಾ ಬರೆದುಕೊಟ್ಟಿದ್ದಾರೆ ಎಂದರೆ ಅಗ್ರೀಮೆಂಟ್ ಮಾತ್ರ ಬರೆದುಕೊಟ್ಟಿದ್ದಾರೆ ಆ ಇನ್ನೊಂದು ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದು ಸಾಕ್ಷಿಗೆ ಒಟ್ಟು 6 ರೂಪಾಯಿಗಳ ಪತ್ರಗಳ ಮೇಲೆ ಬರೆದಿರುವ ದಿನಾಂಕ 12.01.2018 ರ ಕ್ರಯದ ಕರಾರು ಪತ್ರವನ್ನು ತೋರಿಸಿದ್ದು ಸಾಕ್ಷಿಯು ಅದರಲ್ಲಿ ಅವರ ಸಹಿಯನ್ನು ಗುರುತಿಸಿದ್ದಾರೆ ಪ್ರತಿವಾದಿಗಳು ಸದರಿ ಕರಾರಿನ ಮೇಲೆ ಸೂಕ್ತ ಸ್ಟಾಂಪ್ ಶುಲ್ಕ ಮತ್ತು ದಂಡ ಶುಲ್ಕವನ್ನು ಪಾವತಿಸಿ ಗುರುತಿಸಿಕೊಳ್ಳುವಂತೆ ಸೂಚಿಸಲಾಗಿದೆ. ನಾನು ದಿನಾಂಕ 12.01.2018 ರ ಕ್ರಯದ ಕರಾರಿನಲ್ಲಿ ನಮೂದಾಗಿರುವ ರೂ. 9 ಲಕ್ಷಗಳನ್ನು ಮಾತ್ರ ಪ್ರತಿವಾದಿಗಳಿಗೆ ಕೊಟ್ಟಿದ್ದೇನೆ ಎಂದರೆ ಇಲ್ಲ ರೂ. 15 ಲಕ್ಷಗಳನ್ನು ಚೆಕ್ ಮೂಲಕವೇ ಕೊಟ್ಟಿದ್ದೇನೆ. ನಾನು ಆದಾಯ ತೆರಿಗೆ ಪಾವತಿದಾರ ಎಂದರೆ ಸರಿ. ನಿಪಿ 1 ಕ್ರಯದ ಕರಾರನ್ನು ನನ್ನ ಟ್ಯಾಕ್ಸ್ ರಿಟರ್ನ್ಸ್ ಸಲ್ಲಿಸುವ ಉದ್ದೇಶಕ್ಕಾಗಿ ಬರೆಯಿಸಿಕೊಂಡಿದ್ದೆ

ಎಂದರೆ ಸರಿಯಲ್ಲ. ನಿಪಿ 1 ಮತ್ತು ಪಾಟೀಸವಾಲಿನಲ್ಲಿ ತೋರಿಸಿದ ಕ್ರಯದ ಕರಾರು ಎರಡನ್ನೂ ದಿನಾಂಕ 12.01.2018 ರಂದೇ ತಯಾರಿಸಲಾಗಿದೆ ಎಂದರೆ ಸರಿ.

**(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ